ಕುಣಿಗಲ್‌ನಲ್ಲಿರುವ ಟರ್ಫ್ ಕ್ಲಬ್ ಬಗ್ಗೆ

202 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಕುಣಿಗಲ್‌ನಲ್ಲಿರುವ ಟರ್ಫ್ ಕ್ಲಬ್‌ನ್ನು ಮುಚ್ಚುವ ಪ್ರಸ್ತಾಪವಿದೆಯೆ?

ಆ) ಹಾಗಿದ್ದಲ್ಲಿ, ಕುಣಿಗಲ್‌ನಲ್ಲಿರುವ ಟರ್ಫ್ ಕ್ಲಬ್‌ನ್ನು ಮುಚ್ಚುವುದಕ್ಕೆ ವಿರೋಧ ವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಕುಣಿಗಲ್‌ನಲ್ಲಿರುವ ಟರ್ಫ್ ಕ್ಲಬ್‌ನ್ನು ಮುಚ್ಚುವ ಪ್ರಸ್ತಾಪವನ್ನು ಸರ್ಕಾರ ಕೈಬಿಡುವುದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಕುಣಿಗಲ್‌ನಲ್ಲಿರುವ ಕುದುರೆಗಾವಲನ್ನು (ಸ್ಟಡ್ ಫಾರಂ) ಮುಚ್ಚುವ ಪ್ರಸ್ತಾಪ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ.

ತುಮಕೂರು ಜಿಲ್ಲೆಯಲ್ಲಿ 1990ನೇ ಸಾಲಿನಲ್ಲಿ ಸ್ಥಾಪಿಸಲಾದ ಸಣ್ಣ ಪ್ರಮಾಣದ ಕೈಗಾರಿಕೆಗಳ ಬಗ್ಗೆ

205 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ತುಮಕೂರು ಜಿಲ್ಲೆಯಲ್ಲಿ ದಿನಾಂಕ 1-4-90ರಿಂದ ಇದುವರೆಗೆ ಸ್ಥಾಪಿಸಿರುವ ಸಣ್ಣ ಪ್ರಮಾಣದ ಕೈಗಾರಿಕೆಗಳೆಷ್ಟು?

ಆ) ಇವುಗಳಲ್ಲಿ ಕುಣಿಗಲ್ ತಾಲ್ಲೂಕಿನಲ್ಲಿ ಸ್ಥಾಪಿತವಾಗಿರುವ ಸಣ್ಣ ಪ್ರಮಾಣದ ಕೈಗಾರಿಕೆಗಳೆಷ್ಟು?

ಇ) 1991ರಲ್ಲಿ ತುಮಕೂರು ಜಿಲ್ಲೆಯಲ್ಲಿ ಸ್ಥಾಪಿಸಲ್ಪಡುವ ಸಣ್ಣ ಪ್ರಮಾಣದ ಕೈಗಾರಿಕೆಗಳೆಷ್ಟು ಮತ್ತು ನಿರ್ದಿಷ್ಟವಾಗಿ ಕುಣಿಗಲ್ ತಾಲ್ಲೂಕಿನಲ್ಲಿ ಎಷ್ಟು?

ಶ್ರೀ ನಸೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು):

ಅ) 465

ಆ) 19

ಇ) ತುಮಕೂರು ಜಿಲ್ಲೆ-104

ಕುಣಿಗಲ್ ತಾಲ್ಲೂಕು-16

ನಾರಾಯಣಪುರ ಅಣೆಕಟ್ಟಿನ ಹಿಂಬದಿ ನೀರಿನಲ್ಲಿ ಮೊಸಳೆ ಹಾವಳಿಯಿಂದ ಜನರು ಪ್ರಾಣ ಕಳೆದುಕೊಂಡಿರುವುದರ ಬಗ್ಗೆ ಪ್ರಸ್ತಾಪ

229 - ಶ್ರೀ ಹೆಚ್.ವೈ. ಮೇಟಿ (ಗುಳೇದಗುಡ್ಡ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ನಾರಾಯಣಪುರ ಅಣೆಕಟ್ಟಿನ ಹಿಂಬದಿ ನೀರಿನಲ್ಲಿ ಮೊಸಳೆ ಹಾವಳಿಯಿಂದ ಜನರು ಪ್ರಾಣ ಕಳೆದುಕೊಂಡ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಮೊಸಳೆ ಹಾವಳಿಯಿಂದ ಜನರ ಪ್ರಾಣ ರಕ್ಷಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು)

ಅ) ನದಿಯಿಂದ ನೀರು ತುಂಬುವ ಸಂದರ್ಭದಲ್ಲಿ ಒಬ್ಬ ಮಹಿಳೆ ಮೊಸಳೆ ಹಾವಳಿಯಿಂದ ಮೃತಪಟ್ಟ ಬಗ್ಗೆ ತಿಳಿದು ಬಂದಿದೆ.